**ಸಾಕ್ಷಿಗೆ ದಿನಾಂಕಃ12-11-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. SNR ವಕೀಲರಿಂದ ::**

ನಮ್ಮ ಕ್ರಯಪತ್ರದ ಅನ್ವಯ 3 ಅಡಿ ಓಣಿ ಎಂದು ನಮೂದಿಸಿರುವ ಇಬ್ಬರು ಮಾರಾಟಗಾರರಿಗೂ ಸೇರಿದ್ದ ಓಣಿ ಆಗಿತ್ತು ಎಂದರೆ ಸರಿ. ವಾದ ಪತ್ರದ ಅನುಸೂಚಿಯಲ್ಲಿ ಸದರಿ ಓಣಿಯನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಕ್ರಯಪತ್ರದಲ್ಲೂ ಸಹ ಸದರಿ ಓಣಿಯ ಬಗ್ಗೆ ನಿಖರವಾಗಿ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಈಗ ತೋರಿಸಿರುವ ನಿಪಿ1 ಕ್ರಯಪತ್ರದಲ್ಲಿ ಅದರ ಬಗ್ಗೆ ನಮೂದು ಇರುವುದಿಲ್ಲ, ಆದರೆ ನನ್ನ ಬಳಿ ಇರುವ ಮೂಲ ಕ್ರಯಪತ್ರದಲ್ಲಿ ಅದರ ಬಗ್ಗೆ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಮೂಲ ಕ್ರಯಪತ್ರವು ದಾವಾ ಹೂಡುವ ಸಮಯದಲ್ಲಿ ಬ್ಯಾಂಕ್ ನಲ್ಲಿ ಇಟ್ಟಿದ್ದ ಕಾರಣ ಅದನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಬ್ಯಾಂಕ್ ನಿಂದ ಅದರ ಪ್ರತಿಯನ್ನು ತಂದು ಹಾಜರುಪಡಿಸಲು ಯಾವುದಾದರು ತೊಂದರೆ ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಿಪಿ1 ನ್ನು ಈಗಾಗಲೇ ಹಾಜರುಪಡಿಸಿರುವ ಕಾರಣ ಅದರ ಅವಶ್ಯಕತೆ ಇರುವುದಿಲ್ಲ. ನನ್ನ ಪ್ರಕಾರ ಮೂಲ ಕ್ರಯಪತ್ರದಲ್ಲಿ ಇರುವ ಅಂಶಗಳು ಮತ್ತು ನಿಪಿ1 ರಲ್ಲಿ ಇರುವ ಅಂಶಗಳು ಬೇರೆ ಬೇರೆಯಾಗಿರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಂದೇ ಆಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ಖರೀದಿ ಮಾಡಿರುವ ಜಾಗಗಳ ಚೆಕ್ಕುಬಂದಿಯ ಯಾವುದೇ ದಿಕ್ಕಿನಲ್ಲಿ ಓಣಿಯ ಬಗ್ಗೆ ನಿಪಿ1 ಕ್ರಯಪತ್ರದಲ್ಲಿ ನಮೂದು ಇರುತ್ತದೆಯೇ ಎಂದರೆ ಸಾಕ್ಷಿಯು ಇರುತ್ತದೆ ಎಂದು ನುಡಿಯುತ್ತಾರೆ. 20 x 65 ಮತ್ತು 20 x 40 ಅಡಿಯ ಸ್ವತ್ತುಗಳು ಚೆಕ್ಕುಬಂದಿ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಸ್ವತ್ತಿನ್ನ ಪೂರ್ವಕ್ಕೆ ಬೊಮ್ಮಹಳ್ಳಿ ಮಹಾದೇವಪ್ಪ ಸ್ವತ್ತು ಇರುವುದಾಗಿ ನಮೂದಿಸಿದ್ದು ಸದರಿಯವರು 2 ನೇ ಪ್ರತಿವಾದಿಯ ಜಾಗದ ಮಾರಾಟಗಾರರಾಗಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಕ್ರಯಪತ್ರ ಆಗುವ 20

ವರ್ಷದ ಹಿಂದೆಯೇ 2 ನೇ ಪ್ರತಿವಾದಿಯು ತನ್ನ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು 1977 ರಲ್ಲಿ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಶೆಡ್ಯೂಲ್ ಸ್ವತ್ತಿನ ಉತ್ತರಕ್ಕೆ 1 ನೇ ಪ್ರತಿವಾದಿಯ ಜಾಗ ಇರುತ್ತದೆ. ನಿಪಿ1 ಕ್ರಯಪತ್ರ ಆಗುವ ಪೂರ್ವದಲ್ಲಿ 1 ನೇ ಪ್ರತಿವಾದಿಯವರು ಸದರಿ ಜಾಗವನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿ ತನ್ನ ಸ್ವತ್ತು ಖರೀದಿ ಮಾಡುವ ಪೂರ್ವದಲ್ಲಿ ಅದು ಡಾಃ ರಾಜೇಶ್ ಈಶ್ವರಪ್ಪ ರವರ ಸ್ವತ್ತಾಗಿತ್ತು ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡುವ ಸಮಯದಲ್ಲಿ ಸದರಿ ಜಾಗದ ಮಾಲೀಕರು ಡಾಃ ರಾಜೇಶ್ ಈಶ್ವರಪ್ಪ ಆಗಿದ್ದರು ಎಂದರೆ ಸರಿ. ಸದರಿ ವಿಚಾರಗಳು ನನಗೆ ನನ್ನ ಜಾಗವನ್ನು ಖರೀದಿ ಮಾಡುವ ಪೂರ್ವದಲ್ಲೇ ಗೊತ್ತಿತ್ತು ಎಂದರೆ ಸರಿ. ಸದರಿ ವಿಚಾರವನ್ನು ನನ್ನ ಕ್ರಯಪತ್ರದಲ್ಲಿ ಬರೆಸಿಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಖರೀದಿ ಮಾಡಿರುವ ಒಂದು ಸ್ವತ್ತಿನ ಅಗಲ 11 ಅಡಿ ಹಾಗೂ ಮತ್ತೊಂದು ಸ್ವತ್ತಿನ ಅಗಲ 20 ಅಡಿ ಆಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರ ಮಧ್ಯದಲ್ಲಿ 3 ಅಡಿ ಅಗಲದ ಒಂದು ಓಣಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡಿರುವ ಸ್ವತ್ತಿನ ಸಂಪೂರ್ಣ ವಿಸ್ತೀರ್ಣ 31 x 103 ಅಡಿ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಾರಾಟಗಾರರ ಬಳಿ 34 x 105 ಜಾಗವನ್ನು ನನಗೆ ಮಾರಾಟ ಮಾಡಲು ಯಾವ ದಾಖಲಾತಿಗಳು ಅಡಿಯಲ್ಲಿ ಅಧಿಕಾರ ಇತ್ತು ಎಂದು ತೋರಿಸಲು ಯಾವ ದಾಖಲಾತಿಗಳನ್ನು ಇವರೆಗೂ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಅವುಗಳನ್ನು ಮುಂದೆ ನ್ಯಾಯಾಲಯದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಪಿ2 ರಲ್ಲಿ ಆಗಿರುವ ತಿದ್ದುಪಡಿಯು ಯಾವ ದಾಖಲಾತಿಯ ಆಧಾರದಲ್ಲಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಅದನ್ನು ನಿಪಿ1 ಕ್ರಯ ಪತ್ರದ ಆಧಾರದಲ್ಲಿ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ2 2015-16 ಕ್ಕೆ ಸಂಬಂಧಪಟ್ಟ ದಾಖಲಾತಿ ಆಗಿರುತ್ತದೆ ಎಂದರೆ ಸರಿ. 2002 ರಿಂದ 2015 ರವರೆಗೂ ನನ್ನ ಹೆಸರಿನಲ್ಲಿ ಯಾವ assessment/ಖಾತೆಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಅವುಗಳನ್ನು ಮುಂದೆ ನ್ಯಾಯಾಲಯದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ನಿಪಿ5 ರಂತೆ ಅದರಲ್ಲಿ ಇರುವ ಸ್ವತ್ತಿನ ಅಳತೆ 32 x 132 ಅಡಿಗಳು ಆಗಿರುತ್ತವೆ. ಸದರಿ ಜಾಗಕ್ಕೆ ಸಂಬಂಧಪಟ್ಟಂತೆಯೇ ಪ್ರತಿವಾದಿಗಳು ಮಾನ್ಯ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ 86/2016 ಅನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ದ ಮೊದಲಿಗೆ ತಡೆಯಾಜ್ಞೆ ನೀಡಲಾಗಿರುತ್ತದೆ ಎಂದರೆ ಸರಿ. ಅದೇ ರೀತಿ 2 ನೇ ಪ್ರತಿವಾದಿಗಳು ಅಸಲು ದಾವಾ 84/2016 ಸಹ ನನ್ನ ವಿರುದ್ದ ಮಾನ್ಯ ಅಧಿಕ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ್ದರು ಎಂದರೆ ಸರಿ. 2 ನೇ ಪ್ರತಿವಾದಿಯ ಸ್ವತ್ತಿನ ಪೂರ್ವಕ್ಕೆ ಸರ್ಕಾರಿ ರಸ್ತೆ ಇದ್ದು ಅವರ ಜಾಗದ ಹಿಂಭಾಗದ ಜಾಗವನ್ನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. 2 ನೇ ಪ್ರತಿವಾದಿಯ ಸ್ವತ್ತಿನ ವಿಸ್ತೀರ್ಣ ನನಗೆ ತಿಳಿದಿರುತ್ತದೆ. ನಿಪಿ6 ನ್ನು ಡಾಃ ರಾಜೇಶ್ ಈಶ್ವರಪ್ಪ ರವರಿಂದ ಸುಮ್ಮತಿ/1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿರುವ ವಿಚಾರ ತೋರಿಸಲು ಮಾತ್ರ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಇರುವ ಜಾಗದ ವಿಸ್ತೀರ್ಣ ಸರಿ ಇರುತ್ತದೆ. ನಿಪಿ8 2 ನೇ ಪ್ರತಿವಾದಿಯ ಜಾಗಕ್ಕೆ ಸಂಬಂಧಪಟ್ಟ ದಾಖಲೆ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಇರುವ ವಿಸ್ತೀರ್ಣ ನನ್ನ ಪ್ರಕಾರ ಸರಿ ಇರುತ್ತದೆ. ನನ್ನ ಹಾಗೂ ಪ್ರತಿವಾದಿಯ ಸ್ವತ್ತಿನ ವಿಸ್ತೀರ್ಣ ದ ಬಗ್ಗೆ ನನಗೆ ಯಾವುದಾದಾರು ತಕರಾರು ಇರುತ್ತದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ9 ರ ಪ್ರಕಾರ ನನ್ನ ಸ್ವತ್ತಿನ ಅಳತೆ 20 x 103 ಅಡಿ ಆಗಿರುತ್ತದೆ ಎಂದರೆ ಸಾಕ್ಷಿಯು ಅದು ಕೇವಲ ಒಬ್ಬ ಖರೀದಿದಾರರಿಂದ ಖರೀದಿ ಮಾಡಿದ ಆಸ್ತಿಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ2 ಮತ್ತು 9 ನ್ನು ನಾನು 2015-16 ನೇ ಸಾಲಿನಲ್ಲಿ ಪಡೆದು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಪಿ10 ರ ಪ್ರಕಾರ ನನ್ನ ಜಾಗ 104 ಅಡಿ ಉದ್ದ ಎಂದು ತೋರಿಸುತ್ತದೆ ಎಂದರೆ ಸರಿಯಲ್ಲ. ನನ್ನ ಸ್ವತ್ತಿನ ವಿಸ್ತೀರ್ಣವನ್ನು ತೋರಿಸಲು ನಿಪಿ10 ನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನನ್ನ ಸ್ವತ್ತಿನ ಉದ್ದ 105 ಅಡಿಗಳು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ13 ರ ಪ್ರಕಾರ 1 ನೇ ಪ್ರತಿವಾದಿಯ ಜಾಗದ ಕಡೆಗೆ ನನ್ನ ಕಟ್ಟಡದ ಎಲ್ಲಾ ಕಿಟಕಿಗಳನ್ನು ಇಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕಿಟಕಿಗಳನ್ನು 1 ನೇ ಪ್ರತಿವಾದಿಯ ಜಾಗಕ್ಕೆ ಅಂಟಿಕೊಂಡಂತೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ13 ರ ಪ್ರಕಾರ ನನಗೆ ನೀಡಿರುವ ಕಟ್ಟಡ ಪರವಾನಗಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನನ್ನ ಪರವಾನಗಿಯ ಪ್ರಕಾರ ನಾನು ಎಷ್ಟು ಅಡಿ ಸೆಟ್ ಬ್ಯಾಕ್ ಅನ್ನು ನೀಡಬೇಕೆಂದು ಪರವಾನಗಿ ನೋಡಿ ಹೇಳಬೇಕಾಗುತ್ತದೆ. ಸತ್ಯಾಂಶಗಳು ತಿಳಿದು ಬರುತ್ತದೆ ಎನ್ನುವ ಕಾರಣಕ್ಕೆ ಉದ್ದೇಶಪೂರ್ವಕವಾಗಿ ನಾನು ಪರವಾನಗಿಯನ್ನು ಹಾಜರುಪಡಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ವಿರುದ್ದ 2 ದಾವೆಗಳನ್ನು ಹೂಡಿದ ಕಾರಣಕ್ಕೆ ದುರುದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸ್ವತ್ತಿನ ಸ್ವಾಧೀನಕ್ಕೆ ಯಾವುದೇ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: